SERVICE ABOVE SELF




Rotary

विश्वमित्र:

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD

Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –14 ದಿನಾಂಕ : 08–10–2025

## ದಿನಾಂಕ: 08.10.2025ರ ವಾರದ ಸಭೆ

**ದಿನಾಂಕ: 08.10.2025 ನೇ ಬುಧವಾರ ಈ ಸಾಲಿನ ಹದಿನಾಲ್ಕನೇ ವಾರದ ಸಭೆ. ಶ್ರೀ ನೃಪತುಂಗ–ಖ್ಯಾತ ಲೇಖಕರು, ಕಥೆಗಾರರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ, ಜವಹರಲಾಲ್ ಇಂಜಿನಿಯರಿಂಗ್ ಕಾಲೇಜು, ಶಿವಮೊಗ್ಗ ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ, 'ಸಾಹಿತ್ಯ ಮತ್ತು ವೈಚಾರಿಕ ಪ್ರಜ್ಞೆ' ಎಂಬ ವಿಚಾರವಾಗಿ ಮಾತನಾಡಿದರು. ಮುಖ್ಯ ಅತಿಥಿಗಳ ಜೊತೆಗೂಡಿ ವೇದಿಕೆಯಲ್ಲಿ ಅಧ್ಯಕ್ಷರಾದ ರೊ.ಆರ್.ಆನಂದ್ ಮತ್ತು ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವೇದಿಕೆಯಲ್ಲಿದ್ದು, ಸಾರ್ಜೆಂಟ್ ರೊ.ಎಸ್. ಮಂಜುನಾಥರವರು ಅಧ್ಯಕ್ಷರಿಗೆ ಕಾಲರ್ ತೊಡಿಸುವುದರ ಮೂಲಕ ಸಭೆ ಚಾಲನೆಗೊಂಡಿತು.**










ರೊ. ವಂದಿತಾ ಸಂದೀಪ್‌ರವರು "ಕುಂಕುಮ ತಂದಿರುವೆ ಜಗದಾಂಬೆಗೆ – ಮಂಜುನಾಥ ಸ್ವಾಮಿಯ ಪ್ರಾಣಪ್ರಿಯೆಗೆ" ಎಂಬ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ ಪ್ರಾರ್ಥನೆಯನ್ನು ಮಾಡಿದರು. ರೊ.ಎನ್.ವಿ.ಭಟ್‌ರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಪ್ರಕಟಣೆ ಹಾಗೂ ಹುಟ್ಟು ಹಬ್ಬದ ಶುಭಾಶಯ ಕೋರಿದರು. ರೊ.ವನಿತಾ ಸಂದೀಪ್‌ರವರು ವಲಯ ಮಟ್ಟದ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಎಲ್ಲರಲ್ಲೂ ಮನವಿ ಮಾಡಿಕೊಂಡರು. ರೊ.ಪಿಡಿಜಿ. ಡಾ.ಆರ್.ಡಿ.ಪ್ರಭುರವರು, ಮಾತನಾಡುತ್ತಾ ಯುನೈಟೆಡ್ ಜನರಲ್ ಅಸೆಂಬ್ಲಿಯಲ್ಲಿ ಮೀಟಿಂಗ್ ಆದಾಗ ವಿಟೋ ಪವರ್ ಭಾರತಕ್ಕೆ ಕೊಡಬೇಕು ಎಂದು 183 ರಾಷ್ಟ್ರಗಳಲ್ಲಿ 146 ಓಟು ಭಾರತಕ್ಕೆ ಸಿಕ್ಕಿದ್ದವು. ಇದನ್ನು ತಿಳಿದು ನಮಗೆ ಸಿಕ್ಕೇ ಸಿಗುತ್ತದೆ ಎಂದುಕೊಂಡಿದ್ದೆವು. ಆದರೆ ವಿಟೋ ಪವರ್ ಇದ್ದ ಐದು ರಾಷ್ಟ್ರಗಳ ಸಭೆಯಲ್ಲಿ (ಅಮೇರಿಕಾ, ರಷ್ಯಾ, ಚೈನಾ, ಪ್ರಾನ್ಸ್, ಬ್ರಿಟನ್) ಅಮೇರಿಕಾ ತನ್ನ ವಿಟೋ ಪವರ್‌ನಿಂದ ಸಮ್ಮತಿಯನ್ನು ಕೊಟ್ಟಿಲ್ಲ. ಆದರೂ ಈಗ ಇರುವುದು ನಮ್ಮದು ಬಲಿಷ್ಠ ಭಾರತ, ನವ ಭಾರತ ಎನ್ನುತ್ತಾ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು.

ಮಾಜಿ ಸಹಾಯಕ ಗವರ್ನರ್ ರೊ.ಎನ್.ಎಸ್. ಶ್ರೀಧರ್‌ರವರು, ಅಂದಿನ ಮುಖ್ಯ ಅತಿಥಿಗಳಾದ ಶ್ರೀ ನೃಪತುಂಗರವರನ್ನು ಸಭೆಗೆ







ಪರಿಚಯಿಸಿದರು. ಶ್ರೀಯುತರು ಜೆ.ಎನ್.ಎನ್.ಸಿಯಲ್ಲಿ ಎಂ.ಸಿ.ಎ ಪದವೀದರರಾಗಿದ್ದಾರೆ. ಲೇಖಕರಾಗಿ, ಕಥೆಗಾರರಾಗಿ, ಗುರುತಿಸಿ ಕೊಂಡಿರುವ ಇವರು, ನಾವೀನ್ಯತೆ ಮತ್ತು ಉದ್ಯಮಶೀಲತೆಯ ಕ್ಷೇತ್ರದಲ್ಲಿಯೂ ಸಕ್ರಿಯರಾಗಿದ್ದಾರೆ. ವಚನ ಸಾಹಿತ್ಯ, ಕೌಶಲ್ಯತೆ, ಸೃಜನಶೀಲತೆಯ ವೃದ್ಧಿ ಕುರಿತು ಅನೇಕ ಉಪನ್ಯಾಸಗಳನ್ನು ನೀಡಿದ್ದಾರೆ. ಶಿವಮೊಗ್ಗ ಜಿಲ್ಲಾಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿಯಾಗಿ, ಭಾರತ ಸೇವಾದಳದ ಆಜೀವ ಸದಸ್ಯರಾಗಿ ಸಕ್ರಿಯರಾಗಿದ್ದಾರೆ. ಪ್ರಸ್ತುತ ರಾಷ್ಟ್ರೀಯ ಶಿಕ್ಷಣ ಸಮಿತಿಯ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಕನ್ನಡ ಶಿಲಾಶಾಸನಗಳು ಮತ್ತು ಕೃತಕ ಬುದ್ಧಿ ಮತ್ತೆ ಕುರಿತಾಗಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪಿಹಚ್‌ಡಿ ಸಂಶೋಧನಾ ಪ್ರಕ್ರಿಯೆಯಲ್ಲಿ ಕಾರ್ಯಶೀಲರಾಗಿದ್ದಾರೆ.

ಅಂದಿನ ಸಭೆಯಲ್ಲಿ ಮುಖ್ಯ ಅತಿಥಿಗಳಾದ ಶ್ರೀಯುತ ನೃಪತುಂಗರವರು ಸಾಹಿತ್ಯ ಮತ್ತು ವೈಚಾರಿಕ ಪ್ರಜ್ಞೆ ಎಂಬ ವಿಚಾರವಾಗಿ

### ಈ ವಾರದ ಸಭೆ

**ದಿನಾಂಕ: 15–10–2025, ಬುಧವಾರ** **ಸಂಜೆ 6:45**

**ಮುಖ್ಯ ಅತಿಥಿ:**

**CA ಶರತ್**

**ಚಾರ್ಟರ್ಡ್ ಅಕೌಂಟೆಂಟ್, ಶಿವಮೊಗ್ಗ**

**ವಿಷಯ:**

**ಮನಿ, ಮನೆ, ಮನ**

**ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.**

**ಸ್ಥಳ: ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ




ಮಾತನಾಡುತ್ತಾ, ಗ್ರೀಕ್‌ನ ಸೂರ್ಯದೇವತೆಯ ದೇವಸ್ಥಾನದ ಮೇಲ್ಛಾವಣಿಯಲ್ಲಿ ವೈಚಾರಿಕ ಪ್ರಜ್ಞೆಯ ಒಂದು ಬರಹವಿದೆ ಇದೆ. ಅದೆಂದರೆ– ಭಗವಂತನನ್ನು ದರ್ಶನ ಮಾಡುವುದಕ್ಕೆ ಮುಂಚೆ "ನಿನ್ನನ್ನು ನೀನು ನೋಡಿಕೊ" ಎಂಬುದಾಗಿ. ಇದು ತನ್ನನ್ನು ತಾನು ತಿಳಿದುಕೊಳ್ಳುವ ಮಧ್ಯರಾತ್ರಿಯ ಯೋಚನೆ. ಅದ್ಭುತ ತತ್ವಜ್ಞಾನಿ, ಖ್ಯಾತ ವಿಮರ್ಶಕ ಸಾಕ್ರಟಿಸ್‌ನ ವೃತ್ತಾಂತವನ್ನು ವಿವರಿಸಿದ ಅವರು, ಆತ ಯಾವಾಗಲೂ ತನ್ನನ್ನು ತಾನು ಹುಡುಕುತ್ತಿದ್ದೇನೆ ಎಂಬ ಅವನ ವಿಚಾರಧಾರೆಯನ್ನು ವಿವರಿಸಿದರು. ನಾವುಗಳು ವಿಶ್ವಾಸ ಮತ್ತು ಶಕ್ತಿಯಿಂದ ಭಗವಂತನನ್ನು ಹುಡುಕುತ್ತಿದ್ದೇವೆ. ವಾಸ್ತವಿಕದ ವಿಮರ್ಶೆಯೇ ವಿಜ್ಞಾನ. ಅದರಲ್ಲಿ ವೈಚಾರಿಕತೆ ಹಾಗೂ ಮನೋಧರ್ಮ ಬಹಳ ಅವಶ್ಯಕವಾಗಿದೆ. ಇವೆಲ್ಲವನ್ನು ಕ್ರಿಸ್ತ ಪೂರ್ವದಲ್ಲಿ ಬುದ್ಧನು ಮೌನದ ಮೂಲಕ ಜಗತ್ತಿಗೆ ಹರಡಿದರು. ಮೌನದ ಮೂಲಕ ವೈಚಾರಿಕತೆ ಮತ್ತು ಮನೋಧರ್ಮವನ್ನು ಕಲಿಸಬಹುದು. ಕವಿರಾಜ ಮಾರ್ಗದಲ್ಲಿ ಪರಧರ್ಮ ಸೈರಿಸುವುದೇ ಬಂಗಾರ. ಮನುಷ್ಯಜಾತಿ ಒಂದೇ ವಲಂ ಎನ್ನಲಾಗಿದೆ. ಇವೆಲ್ಲವೂ ಆನಂದದ ಅನ್ವೇಷಣೆಯ ಮಾರ್ಗಗಳಾಗಿವೆ. ಇವೆಲ್ಲದರ ಅನ್ವೇಷಣೆಗೆ ಮೊಬೈಲ್ ತಡೆಯೊಡ್ಡಿದರೂ ನಮ್ಮನ್ನು ನಾವು ತಿಳಿದುಕೊಳ್ಳಬೇಕಾಗಿದೆ. ನಾವ್ಯಾರು ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ. ಉತ್ತಮರು, ಮೇಲು–ಕೀಳು ಎಂಬುದೆಲ್ಲ ತೊಡೆದು ಎಲ್ಲರೂ ಸಮಾನರು ಎಂಬುದಾಗಿ ಸಮಾಜಕ್ಕೆ ತಿಳಿಸಲು ಬಸವೇಶ್ವರರು, ಸಾವಿರಾರು ವಚನಕಾರರು ಬಂದು ಶ್ರಮಿಸಿದ್ದಾರೆ. ಈ ನಡುವೆ ವಚನವೊಂದನ್ನು ಉಲ್ಲೇಖಿಸಿದ ಮುಖ್ಯ ಅತಿಥಿಗಳು – "ಉಳ್ಳವರು ಶಿವಾಲಯ ಮಾಡುವರು – ನಾನೇನು ಮಾಡಲಿ ಬಡವನಯ್ಯ" ಆ ಕಾಲದಲ್ಲಿಯೇ ಇವರೆಲ್ಲರೂ ಧರ್ಮಸಭೆಗಳನ್ನು ನಡೆಸಿದ್ದಾರೆ. ಯುದ್ಧದ ಸಂದರ್ಭವಿದ್ದಾಗಲೂ ಭಕ್ತಿ ಜ್ಯೋತಿಯಾಗಿ ಬೆಳಗುತ್ತಿದೆ. ವಾಸ್ತವಿಕತೆಯನ್ನು ವಿಮರ್ಶೆ ಮಾಡುತ್ತಾ ಸಾಗಿದೆ ಸಮಾಜ ಎನ್ನುತ್ತಾ, ಮುಂದುವರೆದ ಅವರು ದಾಸ ಸಾಹಿತ್ಯದ ಬಗ್ಗೆ ಬೆಳಕು ಚೆಲ್ಲುತ್ತಾ, ಕನಕದಾಸರು ಒಂದು ಕಡೆ ಹೇಳುತ್ತಾರೆ, "ಲೋಕದ ಮಾಯದ ಗಾಯ– ಮನುಷ್ಯನಿಲ್ಲದ ಭೂಮಿ ಮರುಭೂಮಿಯಾಗುತ್ತದೆ" ಎಂಬುದನ್ನು ಮಾರ್ಮಿಕವಾಗಿ ನುಡಿದು ವಿವರಿಸಿದರು.

ಯುದ್ಧಕ್ಕೆ ಒಳಗಾದ ಸಾಮಾನ್ಯ ಜನರ ಪರಿಸ್ಥಿತಿ ಏನು? ಎಂಬುದನ್ನು ಪ್ರಶ್ನಿಸುತ್ತಾ, ಲೋಕದ ಇಷ್ಟೆಲ್ಲಾ ಸಮಸ್ಯೆಗಳ ನಡುವೆ ಸ್ವಾಮಿ ವಿವೇಕಾನಂದರು, ಮಹಾತ್ಮ ಗಾಂಧೀಜಿಯಂಥವರು ಆಗಿ ಹೋಗಿದ್ದಾರೆ. ಗಾಂಧೀಜಿಯವರ ಸಮಾನತೆಯ ಹೋರಾಟ ಅವರನ್ನು ಅದ್ಭುತ ಸಂಘಟನಾ ಶಕ್ತಿಯ ಹೋರಾಟಗಾರರನ್ನಾಗಿ ರೂಪಿಸಿದೆ. ಮಹಾತ್ಮ ಗಾಂಧೀಜಿಯವರು ಬರೆದಿರುವ ನನ್ನ ಸತ್ಯಾನ್ವೇಷಣೆಯ ಕೃತಿಗೆ 2025 ಕ್ಕೆ 100 ವರ್ಷ ತುಂಬುತ್ತದೆ. ಚಲಿಸುವ ರೈಲಿನಿಂದ ದಬ್ಬಿಸಿಕೊಂಡು ನೋವನ್ನು ಅನುಭವಿಸಿ ಪ್ರೀತಿಯ ಭಾಷ್ಯವನ್ನೇ ಬರೆದ ಈ ಪುಸ್ತಕವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರು ಕನ್ನಡಕ್ಕೆ ಬರೆದು ದಾಖಲಿಸಿದ್ದಾರೆ. ಇದರಲ್ಲಿ ಗಾಂಧೀಜಿಯವರು ತಮ್ಮ ಬಾಲ್ಯದಲ್ಲಾದ ತಪ್ಪುಗಳು, ತಪ್ಪಾದ ಮೇಲೆ ತಮ್ಮ ತಂದೆಯವರಲ್ಲಿ ಕ್ಷಮೆ ಕೇಳಿದುದನ್ನು ಉಲ್ಲೇಖಿಸಿದ್ದಾರೆ. ಇವೆಲ್ಲವೂ ಅನ್ವೇಷಣೆಯ ಭಾಗವಾಗಿ ಅವರನ್ನು ಉತ್ತಮ ಹೋರಾಟಗಾರರನ್ನಾಗಿಸಲು ಸಾಧ್ಯವಾಯಿತು.

ಹೊಸ ಸಾಹಿತ್ಯದಲ್ಲಿ ಕುವೆಂಪು, ಭೈರಪ್ಪ ಮುಂತಾದ ಲೇಖಕರು ಅರಿವಿನ ಪ್ರಜ್ಞೆ ಮೂಡಿಸುತ್ತಾರೆ. ವಾಸ್ತವಿಕವಾಗಿ ವಿಮರ್ಶಿಸುವ ಪ್ರಯತ್ನದಲ್ಲಿ ಅವರು ಮನ್ನಣೆ ಪಡೆದಿರುತ್ತಾರೆ. ಸಾಹಿತ್ಯ ಅಧ್ಯಯನವಾಗಬೇಕು. ನಮ್ಮನ್ನು ನಾವು ತೆರೆದುಕೊಳ್ಳುವುದೇ ವೈಚಾರಿಕತೆ. ಇಂದಿನ ಯುವ ಸಮಾಜ ಹೇಗಿದ್ದಾರೆ ಎಂದರೆ ಅವರುಗಳಿಗೆ ವೈಚಾರಿಕ ಪ್ರಜ್ಞೆ ಇಲ್ಲ. ನಿಜವಾದ ಪ್ರಜ್ಞೆಯಿಲ್ಲದೇ ಇರುವುದರಿಂದಲೇ ಯುವಜನರಿಗೆ ಸಾಹಿತ್ಯದಲ್ಲಿ ಆಸಕ್ತಿ ಕಡಿಮೆಯಾಯಿತು. ನಮಗೆ ವೈಚಾರಿಕ, ವೈಜ್ಞಾನಿಕ ಮನೋಧರ್ಮ ಬೇಕು. ಎಷ್ಟೋ ಜನ ಸಾಹಿತ್ಯ ಓದುತ್ತಾರೆ. ಆದರೆ ಫೇಸ್‌ಬುಕ್ ಮತ್ತು ವಾಟ್ಸ್‌ಪ್‌ನಲ್ಲಿ ಬಂದದ್ದೇ ನಿಜವೆಂದು ನಂಬುತ್ತಾರೆ.




ಕರ್ನಾಟಕದಲ್ಲಿ 6 ರಿಂದ 7 ಕೋಟಿ ಜನಸಂಖ್ಯೆ ಇದೆ.7 ದಿನಪತ್ರಿಕೆಗಳಿವೆ. ಮಲಯಾಳಂನಲ್ಲಿ 3 ಕೋಟಿ ಜನಸಂಖ್ಯೆ ಇದೆ.ಅಲ್ಲಿ ಮನೋರಮದಂತಹ ಪತ್ರಿಕೆಗಳಿವೆ. ನಮ್ಮ ಏಳು ಪತ್ರಿಕೆಗಳು ಆ ಮುದ್ರಣಕ್ಕೆ ಸಮವಲ್ಲ. ಅಂದರೆ ಅಲ್ಲಿ ಆ ಮಟ್ಟಿನ ಓದುಗರಿದ್ದಾರೆ. ಸಾಕ್ಷರತೆ ಇದೆ. ನಮ್ಮಲ್ಲಿ ಪತ್ರಿಕೆ ಬರತ್ತೆ ಓದಲ್ಲ. ಯುವಕರಿಗೆ ಪ್ರೇರಣೆ ಕೊಡುತ್ತೇವೆ. ಆದರೆ ಓದುವುದಿಲ್ಲ. ಯಂಡಮೂರಿ ವೀರೇಂದ್ರನಾಥ ರವರ ಪ್ರಸಿದ್ಧ ಹಾಗೂ ತಿಳುವಳಿಕಾ ಪುಸ್ತಕ "ಯಶಸ್ಸಿನ ಹಾದಿ" ಯನ್ನು ಉಲ್ಲೇಖಿಸಿದ ಅವರು, ನಾವು ಓದಬೇಕಾದರೆ ಪ್ರತಿ 25 ನಿಮಿಷಗಳಿಗೊಮ್ಮೆ ಬ್ರೇಕ್ ಕೊಡಬೇಕು.ಆಗ ಯಶಸ್ಸಿನ ದಾರಿ ಸಿಗುತ್ತದೆ. ರೀಲ್ಸ್ 20 ನಿಮಿಷ ನೋಡುತ್ತೇವೆ. ಅದು ದ್ವಿಗುಣಿಸುತ್ತಾ ಸಾಗುತ್ತದೆ. ವಿಪರ್ಯಾಸ ಎಂದರೆ ಇದರಲ್ಲಿ ಯುವಜನರು ಹೆಚ್ಚಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ ಎಂಬುದಾಗಿದೆ ಎಂದರು.

ಕನ್ನಡ ಸಾಹಿತ್ಯ ಅದ್ಭುತವಾದ ಸಾಹಿತ್ಯವಾಗಿದೆ. ಅದು ತನ್ನದೇ ಆದ ರಾಜಮಾರ್ಗ ಪಡೆದಿದೆ. ವರ್ಷಂಪ್ರತಿ ಸಾವಿರಾರು ಪುಸ್ತಕಗಳು ಪ್ರಕಟಿಸಲ್ಪಡುತ್ತವೆ. ಆದರೆ ಓದುಗರನ್ನು ತಲುಪುವುದು ಕಡಿಮೆ. ಅದ್ಭುತವಾದ ಭಾರತ ನಿರ್ಮಾಣವಾಗುತ್ತಿದೆ. ಆದರೂ ಇಲ್ಲಿ ಭಾಷೆಯ ಬಗ್ಗೆ ಗೊಂದಲವಿದೆ. ಕನ್ನಡ ಬರಿನಾಡಲ್ಲ. ನಮ್ಮ ಅಂತರಂಗದ ಬೀಡಾಗಿದೆ. ಕೌಶಲ್ಯ ಪೂರ್ಣ ವಿಚಾರ, ವಿಶ್ವಾಸ ಸೃಷ್ಟಿಸುವ ಕುವೆಂಪು, ಎಸ್.ಎಲ್. ಭೈರಪ್ಪ, ಡಿ.ವಿ.ಜಿ.ಯ ಮಂಕುತಿಮ್ಮನ ಕಗ್ಗಗಳಿಗೆ ಬೆಲೆ ಕೊಡದಿದ್ದರೆ ನಾವು ಯಾರು? ಎಂದು ಪ್ರಶ್ನಿಸುತ್ತಾ, ಭಾಷೆಯನ್ನು ಸೋಲಲು ಬಿಡಬೇಡಿ, ಬಿಟ್ಟರೇ ಎಲ್ಲವೂ ಸೋಲುತ್ತದೆ ಎಂದರು.

ನಾವು ನಮ್ಮ ಮಕ್ಕಳನ್ನು ಸಾಹಿತ್ಯದ ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋಗಲು ಮನಸ್ಸು ಮಾಡುವುದಿಲ್ಲ. ಇಂದಿನ ದಿನಮಾನದಲ್ಲಿ ಒಬ್ಬಂಟಿತನ ಜಾಸ್ತಿಯಾಗಿದೆ. ಅಂದರೆ ನಮ್ಮ ಮೊಬೈಲ್‌ನಲ್ಲಿ ಯುಟ್ಯೂಬ್ ಕಾರ್ಯಕ್ರಮಗಳು ಬರುತ್ತಲೇ ಇದೆ. ನಮಗೆ ಪ್ರಾಧಾನ್ಯತೆ ಏನು? ನಾವು ಕಲಿತ್ತದೇನು ? ಎಂಬುದನ್ನು ಪ್ರಶ್ನಿಸಿಕೊಳ್ಳುತ್ತಾ, ಉತ್ತರವಾಗಿ ಸಾಹಿತ್ಯದ ಬಗ್ಗೆ ನಮ್ಮ ಚರ್ಚೆಯಾಗಬೇಕು. ನಮಗೆ ನಾವೇ ವಿಮರ್ಶೆ ಮಾಡಿಕೊಳ್ಳಬೇಕು. ಅಂಥಹ ವಾತಾವರಣವನ್ನು ನಿರ್ಮಿಸಿಕೊಳ್ಳಬೇಕು. ನಾವೀನ್ಯತೆಗೆ ನಮ್ಮನ್ನು ನಾವು ತೊಡಗಿಸಿಕೊಳ್ಳಲು ಕೌಶಲ್ಯತೆಯ ಅವಶ್ಯಕತೆ ಈಗಿದೆ. ಕನ್ನಡ ಸಾಹಿತ್ಯ ತನ್ನ ಕೊಡುಗೆಯನ್ನು ಕೊಡುತ್ತಲೇ ಇದೆ. ನಾವು ಭಾಷೆಯನ್ನು ಕಾಪಾಡೋಣ. ನಮ್ಮ ಯುವಜನರಿಗೆ ಅಧ್ಯಯನ ಶೀಲತೆಯನ್ನು ಕಲಿಸೋಣ ಎನ್ನುತ್ತಾ ಕುವೆಂಪುರವರ ಜಲಗಾರ ಕೃತಿಯ ಬಗ್ಗೆ ಮಾತನಾಡುತ್ತಾ, 'ಗುಡಿಯಲ್ಲಿರುವ ದೇವರನ್ನು ಗುಡಿಯ ಕಟ್ಟುವವನಲ್ಲಿ ಕಾಣು' ಎಂಬುದರ ಸಾಲುಗಳನ್ನು ಉದ್ಧರಿಸುತ್ತಾ, ಕನ್ನಡದ ಬೆಳವಣಿಗೆಗೆ ಶ್ರದ್ಧೆ, ವಿಶ್ವಾಸ, ಪ್ರಜ್ಞೆ ಮುಖ್ಯ, ಅದನ್ನು ಬೆಳೆಸಲು ಸಾಹಿತ್ಯ ಮುನ್ನಡೆಯಾಗಿ ನಿಲ್ಲಲಿ ಎಂದು ಆಶಿಸಿದರು.

- ರೊ.ಎನ್.ವಿ.ಭಟ್‌ರವರು, ಎನ್.ಇ.ಎಸ್.ನಲ್ಲಿ ಯುವ ಜನರಿಗೆ ಓದಲು ಯಾವ ರೀತಿ ಪ್ರೇರಣೆ ಕೊಡುತ್ತೀರಿ ಎಂದು ಪ್ರಶ್ನಿಸಿದರು. ಆ ಬಗ್ಗೆ ತಾವು ಕೈಗೊಂಡಿರುವ ಕಾರ್ಯಗಳ ಬಗ್ಗೆ, ಅದರಲ್ಲೂ ಕನ್ನಡ ಸಾಹಿತ್ಯದ ಅಧ್ಯಯನದಲ್ಲಿ ಯುವಜನರು ಆಸಕ್ತಿಯಿಂದ ತೊಡಗಿಕೊಳ್ಳುವಂತೆ ಮಾಡುತ್ತಿರುವ ಕಾರ್ಯಗಳ ಬಗ್ಗೆ ವಿವರಿಸಿದರು.
- ರೊ.ಎಸ್. ದತ್ತಾತ್ರಿಯವರು, ವೈಚಾರಿಕತೆ ಎಂದರೆ ನಾಸ್ತಿಕ




ವಾದವೆಂಬುದಾಗಿದೆ ಅದಕ್ಕೆ ನಿಮ್ಮ ನಿಲುವೇನು ಎಂದರು. ಉತ್ತರಿಸಿದ ಶ್ರೀ ನೃಪತುಂಗರವರು, ಒಂದು ಕೃತಿಗೆ ರಚನಾತ್ಮಕ ಪ್ರಕ್ರಿಯೆ, ಹೊಸಶಕ್ತಿ ದೊರಕಿದಲ್ಲಿ ಒಪ್ಪಬಹುದು. ಅಂಧಶ್ರದ್ಧೆ ಬೇಡ. ಪ್ರತಿಯೊಂದು ಧರ್ಮವೂ ತನ್ನದೇ ಆದ ಪ್ರಾಧಾನ್ಯತೆ ಹೊಂದಿದೆ. ಈಗ ಸೃಜನಶೀಲ ರಚನಾತ್ಮಕ ಸಾಹಿತ್ಯ ಬೇಕಾಗಿದೆ ಎಂದರು.

- ರೊ. ಡಿ.ಎಸ್. ನಟರಾಜ್‌ರವರು ಮಾತನಾಡಿ, ಪತ್ರ್ಯ ಪುಸ್ತಕಗಳಲ್ಲಿನ ವಿಷಯಗಳ ಬಗ್ಗೆ ಪ್ರಶ್ನಿಸಿದರು. ಅದಕ್ಕುತ್ತರಿಸಿದ, ಮುಖ್ಯ ಅತಿಥಿಗಳು, ಇಂದು ನಾವು ಅಂಕಗಳ ಭೇಟೆಗಾಗಿ ಹೋಗುತ್ತಿದ್ದೇವೆ. ನಮ್ಮ ಕಾಲದ 'ಬಣ್ಣದ ತಗಡಿನ ತುತ್ತೂರಿ' ಇಂದಿಗೂ ನಮಗೆ ನೆನಪಿದೆ. ಈಗ ಕೌಶಲ್ಯಾಧಾರಿತ ಓದುವಿಕೆ ಇಲ್ಲ. ಪತ್ರಿಕೆ ಪುಸ್ತಕಗಳನ್ನು ಜನ ಓದಬೇಕು. ಮೊಬೈಲ್ ವ್ಯಾಧಿಯಿಂದ ಹೊರಬರಲು ಸಾಹಿತ್ಯ ಸಹಕಾರಿಯಾಗಬೇಕು ಎಂದರು.

ಅಧ್ಯಕ್ಷರಾದ ರೊ.ಆನಂದರವರು ತಮ್ಮ ಅಧ್ಯಕ್ಷೀಯ ಭಾಷಣ ಮಾಡುತ್ತಾ, ಇಂದು ನಿರರ್ಗಳವಾಗಿ ಕನ್ನಡ ಸಾಹಿತ್ಯದ ಬಗ್ಗೆ ವಿಶಿಷ್ಟ ರೀತಿಯಲ್ಲಿ ಮನಮುಟ್ಟುವ ಹಾಗೆ ಮುಖ್ಯ ಅತಿಥಿಗಳು ಮಾತನಾಡಿದ್ದಾರೆ. ವಿಮರ್ಶೆ ಮಾಡಿ ಅವರವರ ಆಲೋಚನೆಗೆ ನಿಲುಕುವ ಹಾಗೆ ನಾವುಗಳು ಅದನ್ನು ತಿಳಿದುಕೊಳ್ಳಬಹುದಾಗಿದೆ ಎನ್ನುತ್ತಾ ಕೃತಜ್ಞತಾ ಪೂರ್ವಕವಾಗಿ ಮುಖ್ಯ ಅತಿಥಿಗಳಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವಂದನಾರ್ಪಣೆ ಮಾಡಿದರು.

# *Zonal Cultural Meet*

***To All Rotarians,***

***Zonal Cultural Meet was fixed on 2nd November Sunday,***

***At Suvarna Samskruthi Bhavan, Shivamogga***

***Keep the Dates reserved for this event only. Members who Interested to participate kindly give names to Rtn. Vanita Sandeep, Mob: 94494 26894***

## *List of Events*

| Sl. No. | Events | Duration | Participants | Mandatory Conditions |
|---|---|---|---|---|
| 1 | Janapada Geethe (Folk Song) | 5 Min | Only for Women (Lady Rotarians or Anns) | Only Female participants are allowed, either Lady Rotarians or Anns |
| 2 | Film Song (Solo) | 5 Min | Only for Men (Rotarians or Spouse of Lady Rotarians) | Only Male participants are allowed, either Rotarians or Spouse of Lady Rotarians |
| 3 | Duet Song | 5 Min | Rotarian(Male/Female) with Ann or Annet or John or Spouse of Lady Rotarian | One Rotarian is compulsory and should be a combination of male and female |
| 4 | Mono Acting | 5 Min | Rotarians (Male or Female) | Event is only for Rotarians or Lady Rotarians and costumes are not compulsory |
| 5 | Group Dance (Only for Filmy or Folk songs) | 5 Min | Min 6 and maximum 12 participants with combination of Rotarians, Anns and Annet/John. | Group should be combination of Rotarians, Anns and Annet/John and performance has to be continuous dance form. Acting or Nrithya Roopaka are not allowed |
| 6 | Group Song (Mix of 2 or more songs are not allowed) | 5 Min | Min 6 and maximum 12 participants with combination of Rotarians, Anns and Annet/John. | Group should be combination of Rotarians, Anns and Annet/John and should sing only one song (mixing of different songs are not allowed) |
| 7 | Dance (Solo) | 5 Min | Annet or John | Age limit is 18 years (born on or after 01-11-2007 & should provide the proof) |
| 8 | Skit | 15 Min | Min 6 and maximum 15 participants with combination of Rotarians, Anns and Annet/John | Group should be combination of Rotarians, Anns and Annet/John and rotary theme is not compulsory. |
| 9 | Dance (Solo) (Film Song) | 5 Min | Rotarians (Male or Female) | Event is only for Rotarians or Lady Rotarians |

## ಸಂಪಾದಕೀಯ



### ಮನಸ್ಸೆಂಬ ಮನೆಯ ಕಸಗುಡಿಸಿ

ಮಾರ್ಟಿನಾ ನವ್ರಾಟಿ ಲೋವಾರನ್ನು ಒಬ್ಬ ಸಂದರ್ಶಕ ಕೇಳಿದ, "ನಿಮಗೀಗ 53 ವರ್ಷ. ಅದು ಹೇಗೆ ನೀವು ಈ ವಯಸ್ಸಿನಲ್ಲೂ ಇಷ್ಟು ಸೊಗಸಾಗಿ ಬಾಲ್ ಮೇಲೆ ಫೋಕಸ್ ಮಾಡುತ್ತೀರಿ? ಒಳ್ಳೇ ದೇಹದಾರ್ಢ್ಯ, ಚುರುಕು ಆಟ. ಹೇಗೆ ಇದು ಸಾಧ್ಯ?"

ಮಾರ್ಟಿನಾ ಉತ್ತರಿಸಿದರು: "ಟೆನ್ನಿಸ್ ಬಾಲ್‌ಗೆ ನನ್ನ ವಯಸ್ಸು ಗೊತ್ತಿಲ್ಲ"

ನಿಮ್ಮನ್ನು ನೀವೇ ತಡೆಯುವುದನ್ನು ಮೊದಲು ನಿಲ್ಲಿಸಿ. ಜೀವನದ ಪ್ರತಿ ಆಟವೂ ನಿಮ್ಮ ಎರಡು ಕಿವಿಗಳ ನಡುವಿನ ಅಂಗಳದಲಿ. ಅಂದರೆ ಆರಿಂಚಿನ ನಿಮ್ಮ ಮೆದುಳೆಂಬ ಮೈದಾನದಲ್ಲಿ ಇರುತ್ತದೆ. ನಾವು ಬದುಕುವುದು ಫ್ಲಾಟಿನಲ್ಲೋ, ಡ್ಯುಪ್ಲೆಕ್ಸ್ ಮನೆಯಲ್ಲೋ, ಬಂಗಲೆಯಲ್ಲೋ, ಗುಡಿಸಿಲಿನಲ್ಲೋ ಅಲ್ಲ. ನಾವು ಹುಟ್ಟಿದಾಗಲಿಂದ ಕಡೆಯವರೆಗೂ ಜೀವಿಸುವುದು ಮೇರೆಯೇ ಇಲ್ಲದ ನಮ್ಮ ಮನಸ್ಸೆಂಬ ಅಂಗಳದ ಮನೆಯಲ್ಲಿ. ಜೀವನ ಸುಂದರವೆನಿಸುವುದು ಆ ಮನಸ್ಸೆಂಬ ಮನೆಯನ್ನು ಕಸಗುಡಿಸಿ ಶುಭ್ರವಾಗಿಟ್ಟುಕೊಂಡಾಗ ಮಾತ್ರ.

ಮನಸ್ಸನ್ನು ದ್ವೇಷವೆಂಬ ಕಸದಿಂದ ಗಲೀಜಾಗಿಟ್ಟು ಕೊಂಡರೆ, ಮನಸ್ಸಿನ ಮೂಲೆಯಲ್ಲಿ ವಿಷಾದವನ್ನು ಪೇರಿಸಿಟ್ಟು ಕೊಂಡರೆ, ಮನಸ್ಸಿನ ಅಡುಗೆ ಮನೆಯಲ್ಲಿ ನಿರೀಕ್ಷೆಗಳು ಕುದಿಯುತ್ತಿದ್ದರೆ, ಮನಸ್ಸೆಂಬ ಮನೆಯ ಕಾರ್ಪೆಟ್ ಅಡಿಯಲ್ಲಿ ರಹಸ್ಯಗಳನ್ನು ಮುಚ್ಚಿಟ್ಟುಕೊಂಡಿದ್ದರೆ, ಚಿಂತೆಯೆಂಬ ಕಸ ಮನೆಯಿಡೀ ತುಂಬಿದ್ದರೆ, ಮನಸ್ಸೆಂಬ ಸುಂದರ ಮನೆಯೇ ನಾಶವಾಗುತ್ತದೆ.

ಜೀವನವನ್ನು ಅತ್ಯುತ್ತಮವಾಗಿ ಜೀವಿಸಲು ಮುಖ್ಯವಾಗಿ ಬೇಕಿರುವುದು ಆಂತರಿಕ ಸಂಭಾಷಣೆಯ ಗುಣಮಟ್ಟ ಮತ್ತು ಪ್ರಮಾಣ ಎರಡನ್ನೂ ನಿಯಂತ್ರಣದಲ್ಲಿಟ್ಟುಕೊಳ್ಳುವ ನಮ್ಮ ಮನಸ್ಸಿನ ಸಾಮರ್ಥ್ಯ.

ಈ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ನಾವು ಬದುಕು ನಡೆಸಬೇಕಿರುವುದು PIECE ಆಗಿ ಅಲ್ಲ...! PEACE ನಲ್ಲಿ...!!

• ರೊ. ಎಂ. ಮಾಧವಾಚಾರ್

---



Raghavendra R. Pawar
12th Oct








Ravi Patil
15-October

## ಜನ್ಮ ದಿನದ ಶುಭಾಶಯಗಳು



Bhargavi Bhat
16th October



Mary Joseph
17th Oct



Dr Rajani Pai
20th Oct

### ಮೂಗು ಮತ್ತು ಬಾಯಿಯ ದುರ್ವಾಸನೆಗೆ ಆಯುರ್ವೇದ ಚಿಕಿತ್ಸೆ

**ರೊ. ಡಾ. ಕಾಂಚನ್ ಕುಲಕರ್ಣಿ,** ಬಿ.ಎ.ಎಂ.ಎಸ್. ಎಂ.ಡಿ. ಪಿಜಿಡಿಸಿಸಿಟಿ
**ಪಂಚಮಿ ಆಯುರ್ವೇದ ಚಿಕಿತ್ಸಾ ಕೇಂದ್ರ, ಕುವೆಂಪು ರಸ್ತೆ, ಶಿವಮೊಗ್ಗ**

- **ಗಂಧೂಷ (ಕವಳ)** : ಪ್ರತಿದಿನ ಬೆಳಗ್ಗೆ ನಿಂಬೆ ಹಣ್ಣಿನ ರಸ+ಉಪ್ಪು+ನೀರು ಮಿಶ್ರಣದಿಂದ ಕವಳ ಮಾಡುವುದು.
  ಅಥವಾ ತಿಲ ತೈಲ (ಎಳ್ಳೆಣ್ಣೆ) ಯಿಂದ ಕವಳ ಮಾಡುವುದರಿಂದ ಬಾಯಿಯ ದುರ್ವಾಸನೆ ಕಡಿಮೆಯಾಗುತ್ತದೆ.
- **ತ್ರಿಫಲಾ ಕಷಾಯ** : ದಿನಕ್ಕೆ ಒಮ್ಮೆ ಅಥವಾ ರಾತ್ರಿ ಮಲಗುವ ಮೊದಲು ತ್ರಿಫಲಾ ಕಷಾಯದಿಂದ ಬಾಯಿ ತೊಳೆದುಕೊಳ್ಳುವುದು ಶ್ರೇಯಸ್ಕರ. ಇದು ಬಾಯಿಯ ಅಶುದ್ಧಿಯನ್ನು ನಿವಾರಿಸುತ್ತದೆ.
- **ಜೇಷ್ಠಮಧು (ಅತಿಮಧುರ)** : ದಿನಕ್ಕೆ ಒಂದು ಚಿಕ್ಕ ತುಂಡು ಅತಿಮಧರುವನ್ನು ಅಗಿಯುವುದು ಅಥವಾ ಕಷಾಯವಾಗಿ ಸೇವಿಸುವುದು ಗಂಟಲು ಶುದ್ಧಗೊಳಿಸುತ್ತದೆ.
- **ಹೆರ್ಬಲ್ ಟೂತ್ ಪೌಡರ್** : ತ್ರಿಫಲಾ+ ಲವಂಗ+ಕರ್ಪೂರ+ ಯಸ್ತಿಮಧು ಮಿಶ್ರಣದಿಂದ ತಯಾರಿಸಿದ ಪೌಡರ್‌ನಿಂದ ಹಲ್ಲು ತೊಳೆಯುವುದು ಉತ್ತಮ.
- **ಆಹಾರ ಕ್ರಮ** : ಬಿಸಿನೀರು ಸೇವನೆ ಉತ್ತಮ.
  ಖಾರದ ಪದಾರ್ಥ, ಮಾಂಸಾಹಾರ, ಮಧ್ಯಪಾನ ಇತ್ಯಾದಿ ಕಡಿಮೆಗೊಳಿಸಿ, ತಾಜಾ ಹಣ್ಣು, ತರಕಾರಿಗಳನ್ನು ಒಳಗೊಂಡ ಸಾತ್ವಿಕ ಆಹಾರ ಸೇವಿಸುವುದು.

**ಗೃಹ ಚಿಕಿತ್ಸೆ** :

- ತುಳಸಿ ಎಲೆ ಅಥವಾ ಪುದಿನ ಎಲೆ ಅಗಿಯುವುದು.
- ಉಪ್ಪು+ಸಾಸಿವೆ ಎಣ್ಣೆ+ನಿಂಬೆ ರಸದಿಂದ ಬಾಯಿ ತೊಳೆಯುವುದು.
- ದಿನಕ್ಕೆ ಎರಡು ಬಾರಿ ಹಲ್ಲು ತೊಳೆಯುವುದು.
- ಹರ್ಬಲ್ ಟೂತ್ ಪೌಡರ್ ಉಪಯೋಗಿಸುವುದು.

### ವಿಶೇಷ ಪ್ರಕಟಣೆ

**ದಯಮಾಡಿ ಸದಸ್ಯರು 2025–26 ನೇ ಸಾಲಿನ ತಮ್ಮ ಸದಸ್ಯತ್ವ ಶುಲ್ಕವನ್ನು ಪಾವತಿ ಮಾಡಬೇಕಾಗಿ ವಿನಂತಿ.**

**– ರೊ. ಆರ್. ಆನಂದ್, ಅಧ್ಯಕ್ಷರು**

**ಬ್ಯಾಂಕ್ ಪಾವತಿ ವಿವರ:**

**ROTARY CLUB SHIMOGA**
**KARNATAKA BANK LTD.**
**Savalanga Road**
**Shimoga - 577 201**
**A/c No. : 7322500103371501**
**IFSC: KARB0000732**

***Scan QR Code to Pay***



### ಮುದ್ದುರಾಮನ ತತ್ವಪದಗಳು...

ಭಾಗ್ಯ ಬಳಿ ಬಂದಾಗ ತೂಕಡಿಸಿ ನಿಲ್ಲದಿರು,
ಸಿರಿ ಯಾವ ರೂಪದಲಿ ಬಂದು ಅಪ್ಪುವುದೋ ।
ನಗುನಗುತಾ ಬರಮಾಡಿಕೊಳ್ಳುವುದ ಕಲಿ ಮೊದಲು
ಸ್ವಾಗತಿಸು ಬರುವಿಕೆಯ – ಮುದ್ದುರಾಮ ॥

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495